(6)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು ನಿಯಮ-330 ರಡಿ ಮಂಡಿಸಿರುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಉತ್ತರ**

*****

**ವಿಷಯ:** ಹಾವೇರಿ ಜಿಲ್ಲೆ ಚೌಡದಾರಪುರ ಹತ್ತಿರ ತುಂಗಭದ್ರ ನದಿಯ ದಂಡೆಯಲ್ಲಿ ಇರುವ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಐಕ್ಯ ಸ್ಥಳವು ಆಗಿಂದಾಗೆ ಬರುವ ಪ್ರವಾಹದಿಂದ ಹಾನಿ ಆಗುತ್ತಿದೆ ಇದು ಶಿಥಿಲಾವಸ್ಥೆಯಲ್ಲಿದೆ. ಈ ಸ್ಥಳಕ್ಕೆ ಧಕ್ಕೆಯಾಗದಂತೆ ಕೂಡಲ ಸಂಗಮದ ಮಾದರಿಯಲ್ಲಿ ಜನಾಕರ್ಷಿವಾಗಿ ಈ ಐಕ್ಯ ಸ್ಥಳವನ್ನು ನಿರ್ಮಿಸುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

*****

**ಉತ್ತರ:** ಹಾವೇರಿ ಜಿಲ್ಲೆ ಚೌಡದಾರಪುರ ಹತ್ತಿರ ತುಂಗಭದ್ರ ನದಿಯ ದಂಡೆಯಲ್ಲಿ ಇರುವ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಐಕ್ಯ ಸ್ಥಳವು ನೀರಾವರಿ ಇಲಾಖೆ / ಪ್ರವಾಸೋದ್ಯಮ ಇಲಾಖೆಯ ಸುಪರ್ದಿಯಲ್ಲಿರುತ್ತದೆ.

ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಐಕ್ಯ ಸ್ಥಳವನ್ನು ಕೂಡಲ ಸಂಗಮದ ಮಾದರಿಯಲ್ಲಿ ಜನಾಕರ್ಷಿವಾಗಿಸುವ ಯೋಜನೆಯ ಕುರಿತು ಜಿಲ್ಲಾಡಳಿತದಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ ಈ ಬಗ್ಗೆ ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: ಕಸಂವಾ 20 ಕವಿಸ 2024

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.